ರಾಜ್ಯದಲ್ಲಿ ಪ್ರಸಕ್ತ ನೆರೆ ಹಾವಳಿಯಿಂದ ಆದ ನಷ್ಟ.

196. 9. ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರಸಕ್ತ ನೆರೆ ಹಾವಳಿಯಿಂದ ಹಾನಿಗೀಡಾದ ಮತ್ತು ನೊಂದವರ ಸಂಖ್ಯೆ ಎಷ್ಟು ?

ಆ) ರಾಜ್ಯದ ಯಾವ ಯಾವ ಪ್ರದೇಶದಲ್ಲಿ ನೆರೆ ಹಾವಳಿಯಿಂದ ತೊಂದರೆಯುಂಟಾಗಿದೆ, ಹಾಗೂ ಈ ಪ್ರದೇಶಗಳಲ್ಲಿ ಹಾನಿಗೊಳಗಾದ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ?

ಇ) ಈ ನೆರೆ ಹಾವಳಿಯಿಂದ ಬೆಳೆಗಳಿಗೆ ಆದ ನಷ್ಟವೆಷ್ಟು ?

ಈ) ಈ ನೆರೆ ಹಾವಳಿಯಿಂದ ಅಸು ನೀಗಿದ ದನಕರುಗಳು, ಕುರಿ ಮುಂತಾದ ಜಾನುವಾರುಗಳ ಸಂಖ್ಯೆ ಎಷ್ಟು ಹಾಗೂ ನಷ್ಟದ ಮೊತ್ತವೆಷ್ಟು ?

ಉ) ಈ ನೆರೆಯಿಂದ ಆದ ಒಟ್ಟು ನಷ್ಟದ ಮೊತ್ತವೆಷ್ಟು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) ರಾಜ್ಯದಲ್ಲಿ ಪ್ರಸಕ್ತ ನೆರೆಯಿಂದ 51.92 ಲಕ್ಷ ಜನರು ತೊಂದರೆಗೀಡಾಗಿದ್ದಾರೆ.

ನೆರೆ ಹಾವಳಿಗೀಡಾದ ಜಿಲ್ಲೆಗಳು ಮತ್ತು ಹಾನಿಗೊಳಗಾದ ಪ್ರದೇಶದ ಒಟ್ಟು ವಿಸ್ತೀರ್ಣ ಈ ಕೆಳಗಿನಂತಿದೆ:

ಜಿಲ್ಲೆಗಳು	ಒಟ್ಟು ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)
1. ರಾಯಚೂರು	1.15
2. ಬಳ್ಳಾರಿ	0.47
3. ಧಾರವಾಡ	0.57
4. ಚಿತ್ರದುರ್ಗ	0.26
5. ಶಿವಮೊಗ್ಗ	0.18
6. ಚಿಕ್ಕಮಗಳೂರು	0.05
7. ಮೈಸೂರು	0.002
8. ಉತ್ತರ ಕನ್ನಡ	0.06
9. ದಕ್ಷಿಣ ಕನ್ನಡ	0.05
10. ಹಾಸನ	0.01
11. ಕೊಡಗು	0.02
12. ಬೆಳಗಾಂ	0.26
13. ಗುಲ್ಬರ್ಗಾ	–
14. ಬಿಜಾಪುರ	0.02
15. ತುಮಕೂರು	0.03
	3,332

ಇ) ಈ ನೆರೆಯಿಂದ ಒಟ್ಟು 3,13,200 ಹೆಕ್ಟೇರ್‌ಗಳಲ್ಲಿ ಇದ್ದ ಬೆಳೆ ನಾಶ ಹೊಂದಿದ್ದು 140.47 ಕೋಟಿ ರೂ.ಗಳು ನಷ್ಟವೆಂದು ಅಂದಾಜಿಸಲಾಗಿದೆ.

ಈ) ಈ ನೆರೆ ಹಾವಳಿಯಿಂದ ಅಸು ನೀಗಿದ ಒಟ್ಟು ಜಾನುವಾರುಗಳ ಸಂಖ್ಯೆ 60751, ಇದರಿಂದಾದ ನಷ್ಟದ ಮೊತ್ತ 350.986 ಲಕ್ಷ ರೂ.ಗಳು.

ಉ) ಈ ನೆರೆ ಹಾವಳಿಯಿಂದಾದ ಖಾಸಗಿ ಆಸ್ತಿ–ಪಾಸ್ತಿಗೆ ರೂ. 207.15 ಕೋಟಿ ನಷ್ಟವಾಗಿದೆ. ಸಾರ್ವಜನಿಕ ಆಸ್ತಿ–ಪಾಸ್ತಿಗೆ ರೂ. 100.72 ಕೋಟಿಗಳ ನಷ್ಟವಾಗಿದೆ. ಒಟ್ಟು ನಷ್ಟದ ಮೊತ್ತ 307.87 ಕೋಟಿ ರೂ.ಗಳು.

ಕೋಲಾರ ಜಿಲ್ಲೆಯಲ್ಲಿ 1991ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಉಂಟಾದ ಹಾನಿಗೆ ಹಣ ಮಂಜೂರಾತಿ

198 (41). ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ 1991ನೇ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಅತಿ ಹೆಚ್ಚಾದ ಅತಿವೃಷ್ಟಿಯ ಪರಿಣಾಮವಾಗಿ ಉಂಟಾದ ನಷ್ಟಗಳನ್ನು ಭರಿಸಲು ಎಷ್ಟು ಕೋಟಿ ಹಣ ಬೇಕೆಂದು ಅಧಿಕಾರಿಗಳು ಕೋರಿದ್ದರು.

ಆ) ಯಾವ ಯಾವ ಬಾಬ್ತಿಗೆ ಅಂದರೆ,

1. ರಸ್ತೆ ರಿಪೇರಿಗಳು
2. ಶಾಲಾ ಮತ್ತು ಕಟ್ಟಡಗಳ ರಿಪೇರಿಗೋಸ್ಕರ
3. ಕೆರೆ ಕೋಡಿಗಳ, ತೂಬು ರಿಪೇರಿಗಳ, ಕೆರೆಗಳ ಇತರ ರಿಪೇರಿಗೋಸ್ಕರ
4. ಬಿದ್ದು ಹೋದ ಮನೆಗಳನ್ನು ಕಟ್ಟುವುದಕ್ಕೋಸ್ಕರ
5. ವ್ಯಕ್ತಿಗಳ ಸಾವಿಗೆ ಅವರ ತಂದೆ ತಾಯಿಗಳಿಗೆ ಧನ ಸಹಾಯ ಕೊಡುವುದಕ್ಕೋಸ್ಕರ ಎಷ್ಟು ಹಣ ಕೇಳಿದ್ದರು ?

ಇ) ಈ ಮೇಲ್ಕಂಡ ಬಾಬ್ತುಗಳಿಗೆ ಸರ್ಕಾರದವರು ಕೊಟ್ಟ ಹಣವೆಷ್ಟು ?

ಈ) ಇನ್ನೂ ಅನೇಕ ಶಾಲಾ ಕಟ್ಟಡಗಳು, ಕೆರೆಗಳು, ರಸ್ತೆಗಳು ರಿಪೇರಿಯಾಗದೆ, ವಿದ್ಯಾರ್ಥಿಗಳು, ಸಾರ್ವಜನಿಕರು ತೊಂದರೆಗೆ ಈಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ, ಆದಷ್ಟು ಬೇಗನೆ ಉಳಿದ ಹಣವನ್ನು ಕೊಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ. ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) 1991ನೇ ಸಾಲಿನ ಅತಿವೃಷ್ಟಿಯ ಪರಿಣಾಮವಾಗಿ ಉಂಟಾದ ನಷ್ಟವನ್ನು ಭರಿಸಲು ಅಧಿಕಾರಿಗಳು 12.99 ಕೋಟಿ ರೂಪಾಯಿಗಳನ್ನು ಕೋರಿದ್ದರು.

ಆ) ಕೋರಲಾಗಿದ್ದ ಹಣದ ವಿವರ ಈ ರೀತಿ ಇದೆ:–